# ಕರ್ನಾಟಕ ಸರ್ಕಾರ

ಸಂಖ್ಯೆ ಮೂಅಇ 254 ಮೂಇವಿ 2011

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 11-05-2012.

# ಅಧಿಸೂಚನೆ

ಕರ್ನಾಟಕ ಸರ್ಕಾರದ ಸಚಿವಾಲಯ ಮೂಲಸೌಲಭ್ಯ ಇಲಾಖೆಯು ಡಾ: ಅಂಬೇಡ್ಕರ್ ವೀಧಿಯ ವಿಕಾಸ ಸೌಧ, ನೆಲಮಹಡಿ, ಬೆಂಗಳೂರು-560 001ಇಲ್ಲಿ ನೆಲೆಗೊಂಡಿದೆ. ಭಾರತ ಸರ್ಕಾರದ ಮಾಹಿತಿ ಹಕ್ಕು ಕಾಯಿದೆ 2005 ರ ಕಲಂ 4(1) ಬಿ ಅನುಸಾರ ಮೂಲಸೌಲಭ್ಯ ಅಭಿವೃದ್ದಿ ಇಲಾಖೆಗೆ ಸಂಬಂದಿಸಿದಂತೆ ಈ ಕೆಳಕಂಡ ಮಾಹಿತಿಗಳನ್ನು ಪ್ರಕಟಿಸಲಾಗಿದೆ.

ಮೂಲಸೌಲಭ್ಯ ಇಲಾಖೆಯು ದಿನಾಂಕ 20-09-1996 ರಿಂದ ಆಸ್ತಿತ್ವಕ್ಕೆ ಬಂದಿದ್ದು, ಸರ್ಕಾರದ ಒಂದು ಹೊಸ ಮತ್ತು ಸಣ್ಣ ಇಲಾಖೆಯಾಗಿದೆ. ಇದಕ್ಕೆ ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಗಳು ಮುಖ್ಯಸ್ಥರಾಗಿದ್ದು ಅವರಿಗೆ ಸಹಾಯ ಮಾಡಲು ವಿಶೇಷ ಕಾರ್ಯದರ್ಶಿ, ಒಬ್ಬರು ನಿರ್ದೇಶಕರು (ಪಿಪಿಪಿ ಕೋಶ) ಇಬ್ಬರು ಉಪ ಕಾರ್ಯದರ್ಶಿಗಳು, ಇಬ್ಬರು ಅಧೀನ ಕಾರ್ಯದರ್ಶಿಗಳು ಹಾಗೂ ತಾಂತ್ರಿಕ ಶಾಖೆಯಲ್ಲಿ ಪೂರಕ ಸಿಬ್ಬಂದಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇದು ಸಚಿವಾಲಯದ ಒಂದು ಇಲಾಖೆ ಮಾತ್ರವಾಗಿರುತ್ತದೆ ಇದಕ್ಕೆ ಕ್ಷೇತ್ರ ಮಟ್ಟದಲ್ಲಿ ಯಾವುದೇ ಅಧೀನ ಇಲಾಖೆಗಳಿರುವುದಿಲ್ಲ.

ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯು, ರಾಜ್ಯದಲ್ಲಿ ಮೂಲಸೌಲಭ್ಯ ಅಭಿವೃದ್ಧಿ ಕ್ಷೇತ್ರದಲ್ಲಿ ಬಂಡವಾಳ ಹೂಡಿಕೆದಾರರಿಗೆ ಅಗತ್ಯ ಮಾರ್ಗದರ್ಶನವನ್ನು, ಅನುಕೂಲತೆಗಳನ್ನು ಒದಗಿಸುವ ಜವಾಬ್ದಾರಿ ಹೊಂದಿದೆ. ವಿವಿಧ ವಲಯಗಳ ಮೂಲಸೌಲಭ್ಯ ಅಗತ್ಯತೆಗಳನ್ನು ಗುರುತಿಸುವುದರೊಂದಿಗೆ, ಅಭಿವೃದ್ಧಿಪಡಿಸಬೇಕಾದಂತಹ ಕ್ಷೇತ್ರಗಳನ್ನು ಗುರುತಿಸುವುದು, ನಿಖರವಾದ ಯೋಜನೆಗಳ ವಿವರಗಳನ್ನು ಸಿದ್ಧಪಡಿಸುವುದು ಮತ್ತು ಯೋಜನೆಗಳ ಮೌಲ್ಯೀಕರಣ ಮಾಡಿ ಖಾಸಗಿ ವಲಯವು ಕೈಗೆತ್ತಿಕೊಳ್ಳಲು ಏರ್ಪಾಡು ಮಾಡುವುದು ಮತ್ತು ಯೋಜನೆಗಳನ್ನು ಒಂದು ಸರಿಯಾದ ತಿಳುವಳಿಕೆ ಒಪ್ಪಂದದಡಿ ಖಾಸಗಿ ವಲಯದವರಿಗೆ ವಹಿಸುವುದು. ಮೂಲಸೌಲಭ್ಯ ಅಭಿವೃದ್ದಿ ಯೋಜನೆಗಳಿಗೆ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯು ರಾಜ್ಯಸರ್ಕಾರದ ಸಲಹೆಗಾರನಾಗಿ ಕಾರ್ಯನಿರ್ವಹಿಸುತ್ತದೆ.

ಜೂನ್ 2000ದಲ್ಲಿ ಮೂಲಸೌಲಭ್ಯ ಅಭಿವೃದ್ಧಿ ನಿಗಮ (ಕರ್ನಾಟಕ) (ಐಡೆಕ್)ಅನ್ನು ಖಾಸಗಿ ಬಂಡವಾಳ ಹೂಡಿಕೆಯನ್ನು ವೃದ್ಧಿಪಡಿಸಲು ಮತ್ತು ಸಾರ್ವಜನಿಕ ಖಾಸಗಿ ಪಾಲುದಾರರು ಮೂಲಸೌಲಭ್ಯ ಅಭಿವೃದ್ಧಿಯಲ್ಲಿ ತೊಡಗಲು ಅನುವು ಮಾಡಿಕೊಡುವುದಕ್ಕೆ ಒಂದು ನೋಡೆಲ್ ಏಜೆನ್ಸಿಯಾಗಿ ಸ್ಥಾಪಿಸಲಾಯಿತು. ಐಡೆಕ್‌ನ ಸಂದಾಯಿತ - ಬಂಡವಾಳವು ರೂ.10.00 ಕೋಟಿಗಳಾಗಿವೆ. ಇದರಲ್ಲಿ ಕರ್ನಾಟಕ ರಾಜ್ಯ ಸರ್ಕಾರವು ಶೇಕಡ 49 ರಂತೆ, ಐ.ಡಿ.ಎಫ್.ಸಿ.ಯು ಶೇಕಡ 49.5 ರಂತೆ ಮತ್ತು ಹೆಚ್‌ಡಿಎಫ್‌ಸಿ ಯು ಉಳಿದ ಶೇಕಡ 1.5 ರಷ್ಟನ್ನು ಹೊಂದಿದೆ. ಈ ಷೇರು ಬಂಡವಾಳವಲ್ಲದೆ ಯೋಜನಾ ಅಭಿವೃದ್ಧಿಗಾಗಿ ಹಾಗೂ ಯೋಜನಾ ಹೂಡಿಕೆಗಾಗಿ ಹಣ ಒದಗಿಸಲು ಕರ್ನಾಟಕ ರಾಜ್ಯ ಸರ್ಕಾರವು ಬದ್ಧವಾಗಿದೆ. ಖಾಸಗಿ ವಲಯದ ಸಹಭಾಗಿತ್ವದಲ್ಲಿ ಜಾರಿಗೊಳಿಸುವಂತಹ ಮೂಲಸೌಲಭ್ಯಗಳ ಸರಣಿ